ವಿಶಾಲವಾದ ಕಟ್ಟಡದ ಎದುರು ನಿಂತು ಹೇಳಿದರು: 'ಇದು ಆನಂದ ವೃದ್ಧಾಶ್ರಮ. ಇಲ್ಲಿ ಇಪ್ಪತ್ತು ಜನ ವೃದ್ಧರಿದ್ದಾರೆ. ಎಲ್ಲರೂ ಆನಂದದಿಂದ ಇದ್ದಾರೆ ಅಂತ ಅಂದ್ಕೊಂಡಿದ್ದೇನೆ!' ಒಳಗೆ ಅಡಿ ಇಟ್ಟೆವು. ಒಂದೊಂದು ಕೋಣೆಯಲ್ಲಿ ಇಬ್ಬಿಬ್ಬರ ವಾಸ. ಪ್ರತಿಯೊಬ್ಬರಿಗೂ ಪ್ರತ್ಯೇಕ ಮಂಚ, ಹಾಸಿಗೆ, ದಿಂಬು, ಚಾದರ, ರಗ್ಗು. ಅವರ ವೈಯಕ್ತಿಕ ಸಾಮಾನು–ಸರಂಜಾಮುಗಳನ್ನಿಡಲು ಪಕ್ಕದಲ್ಲಿ ಪ್ರತ್ಯೇಕ ಸ್ಟೀಲಿನ ಸೈಡ್ ರ್‍ಯಾಕ್. ಪ್ರತಿ ಕೋಣೆಗೂ ಒಂದೊಂದು ಟ್ಯೂಬ್‌ಲೈಟ್, ಫ್ಯಾನ್. ನಾಲ್ಕು ಶೌಚಾಲಯಗಳು. ನಾಲ್ಕು ಬಚ್ಚಲುಮನೆ, ಸಾಮೂಹಿಕ ಊಟದಮನೆ; ಎಲ್ಲವೂ ಸಾದಾ, ಸ್ವಚ್ಛ, ಸುಸಜ್ಜಿತ. ನಾವಲ್ಲಿ ಹೋದಾಗ ಒಬ್ಬಿಬ್ಬರನ್ನು ಹೊರತುಪಡಿಸಿ ಎಲ್ಲರೂ ಒಂದಲ್ಲ ಒಂದು ಕೆಲಸದಲ್ಲಿ ತಲ್ಲೀನರಾಗಿದ್ದರು. 'ಕಾಯಕವೇ ಕೈಲಾಸ' ಮನಸ್ಸಿನಲ್ಲಿಯೇ ಅಂದುಕೊಂಡೆ, 'ಅಲ್ಲಿ ನೋಡಿ, ಇನ್ನೊಂದು ಬಿಲ್ಡಿಂಗ್ ಉಂಟಲ್ಲ ಅದೊಂದು ಅನಾಥಾಶ್ರಮ. ಬನ್ನಿ, ನೋಡೋಣ' ಕುಮಾರ್ ಕುಣಿಯುವ ಭಂಗಿಯಲ್ಲಿ ನಡೆದರು. 'ಸಾರ್, ನಮಗೆ ಒಂದಲ್ಲ, ಎರಡಲ್ಲ ಇಪ್ಪತ್ತೈದು ಮಕ್ಕಳಿದ್ದಾರೆ! ಒಂದನೇ ವರ್ಗದಿಂದ ಎಸ್ಸೆಸ್ಸೆಲ್ಸಿವರೆಗೆ ಕಲಿಯುವ ಇವರಿಗೆಲ್ಲ ಉಚಿತ ವಸತಿ, ಊಟ–ತಿಂಡಿ, ಶಿಕ್ಷಣ. ಇಲ್ಲಿಂದ ನಾಲ್ಕು ಕಿ.ಮೀ. ದೂರದಲ್ಲೊಂದು ಸರಕಾರಿ ಶಾಲೆಯುಂಟು. ನಮ್ಮ ಆಶ್ರಮದ ವ್ಯಾನಿನಲ್ಲಿ ಇವರೆಲ್ಲ ಸ್ಕೂಲಿಗೆ ಹೋಗಿ ಬರ್ತಾರೆ. ಇವರೆಲ್ಲರ ನಿಗಾ ವಹಿಸಲಿಕ್ಕೆ ಹೋಮ್‌ವರ್ಕ್ ಮಾಡಿಸಲಿಕ್ಕೆ ನಮ್ಮೂರಿನ ಮೂರು ಜನ ಪಿ.ಯು.ಸಿ. ಪೂರೈಸಿದ ಹೆಣ್ಣುಮಕ್ಕಳಿದ್ದಾರೆ– ಅವರೂ ಕೂಡಾ ಅನಾಥರೇ. ಇವೆರಡು ಆಶ್ರಮಗಳೂ ನಮ್ಮ ಎರಡು ಕಣ್ಣುಗಳಿದ್ದಂತೆ. ಬಹುಪಾಲು ಎಲ್ಲರೂ ಸುತ್ತಮುತ್ತಲಿನ ಹಳ್ಳಿಯವರು– ಬಡತನವನ್ನೇ ಹಾಸು–ಹೊದ್ದವರು. ಆದ್ರೆ ಹೆಮ್ಮೆಯ ವಿಷಯ ಏನು ಗೊತ್ತಾ? ವೃದ್ಧರಲ್ಲಿ ಬಹುಪಾಲು ಜನ ಅವರ ಅನ್ನವನ್ನು ಅವರೇ ಸಂಪಾದಿಸಿಕೊಳ್ತಾರೆ. ಕೃಷಿ, ಜೇನುಸಾಕಣೆ, ಮರಗೆಲಸ, ಮಕ್ಕಳಿಗೆ ಪಾಠ ಹೇಳುವದು, ಅಡುಗೆ ಕೆಲಸ, ಮನೆಗೆಲಸ ಹೀಗೆ. ಉಚಿತ ಊಟ–ವಸತಿಯ ಜೊತೆ ಅವರಿಗೆ ಮಾಸಿಕ ಸಂಬಳವನ್ನೂ ಕೊಡಲಾಗ್ತದೆ. ಅವರವರಿಗೆ ಇಷ್ಟವಾದ, ಕೈಲಾದ ಕೆಲಸವನ್ನು ಮಾಡಬಹುದು. ನಾವು ಅವರನ್ನು ನೋಡಿಕೊಳ್ತಿಲ್ಲ. ಇನ್‌ಫ್ಯಾಕ್ಟ್ ಅವರೇ ನಮ್ಮನ್ನು, ನಮ್ಮ ಎಸ್ಟೇಟನ್ನು ನೋಡಿಕೊಳ್ತಿದ್ದಾರೆ. ಯಾಕೆ ಗೊತ್ತುಂಟಾ? ನಾನು, ಭಾರತಿ ಇಬ್ರೂ ಕಾಲಿಗೆ ಚಕ್ರ ಕಟ್ಟಿಕೊಂಡವರು. ಟೂರ್‌ಗೆ ಹೋಗಲಿಕ್ಕೆ ನಾವು 'ಎವರೆಡಿ.' ಇಂದು ಉತ್ತರ ಕನ್ನಡದ ಯಾಣವೋ, ಮುರ್ಡೇಶ್ವರವೋ, ಪಕ್ಕದ ಜೋಗವೋ ಆದೀತು. ನಾಳೆ ಮುಂಬೈಗೋ ಅಥವಾ ಅಲ್ಲಿಂದ ಏಳು ಸಾವಿರ ಕಿ.ಮೀ. ದೂರದ ಪ್ಯಾರಿಸ್ಸಿಗೋ, ಅದೂ ಬೇಡ ಅಂತಂದ್ರೆ ಚೈನಾ ವಾಲ್‌ಗೋ, ಅಮೆರಿಕಾದ ನಯಾಗರಾ ಫಾಲ್ಸ್ ಎಂಜಾಯ್ ಮಾಡಲಿಕ್ಕೆ ಹೋದರೂ ಹೋದೇವು. ಭಾರತಿ ಕೂಡಾ ಮಾಜಿ ಟೆಕ್ಕಿ, ಹದಿನಾಲ್ಕು ವರ್ಷ ಸಾಫ್ಟ್‌ವೇರ್‌ನಲ್ಲಿ ಮಣ್ಣು ಹೊತ್ತು ಬಂದಿದಾಳೆ. ಈಗ ನನ್ನಂತೆಯೇ ಅಬ್ಬೆಪಾರಿ. ಹಾಗಾಗಿಯೇ ನಾವಿದ್ರೂ ಒಟ್ಟಿಗೇ ಇರೋದು, ಏನಂತೀರಿ?' ಅಂತ ಹುಬ್ಬು ಹಾರಿಸಿದರು.

'ಅಲ್ಲಾ ಸಾರ್. ನೀವಿಬ್ರೂ ಹೊರಗೆ ಹೋದಾಗ ಇಲ್ಲಿಯ ಆಡಳಿತ ವ್ಯವಸ್ಥೆ?' ನಾನು ಪ್ರಶ್ನಿಸಿದೆ. 'ಅದಕ್ಕೆ ನಮ್ಮ ಊರಿನವನೇ ಆದ ಶೆಟ್ಟಿಗಾರ್ ಎನ್ನುವ ನನ್ನ ಆತ್ಮೀಯನಿದ್ದಾನೆ. ಎಲ್ಲದಕ್ಕೂ ಅವನೇ ಎಡ್ಮಿನಿಸ್ಟ್ರೇಟಿವ್ ಆಫೀಸರ್.' 'ಅದ್ರೂ ಈ ಕಾಲದಲ್ಲಿ ಯಾರನ್ನೂ ಇಡಿಯಾಗಿ ನಂಬುವ ಹಾಗಿಲ್ಲ, ಅಲ್ಲವಾ?' ಸದಾ ಹಣಕಾಸಿನ ವಹಿವಾಟಿನಲ್ಲಿ ಮುಳುಗಿಹೋಗಿ ಸಂಶಯಾತ್ಮನಾದ ನಾನು ಸಹಜವಾಗಿಯೇ ಪ್ರಶ್ನಿಸಿದೆ. 'ಸಾರ್, ನಿಮಗೆ ಒಂದು ವಿಷಯವನ್ನು ಹೇಳ್ತೇನೆ. ಹುಟ್ಟುವಾಗ ನಾನು ಏನನ್ನೂ ತಂದಿಲ್ಲ. ಹೋಗುವಾಗ ಯಾವುದನ್ನೂ ತೆಗೆದುಕೊಂಡು ಹೋಗುವುದಿಲ್ಲ. ದಕ್ಕಿದ್ದರಲ್ಲಿ